ಅಧ್ಯಕ್ಷರು.—ಮುಂದೆ ಬಸ್ ದರವನ್ನು ಹೆಚ್ಚಿಸಿದಾಗ ಎರಡು ದಿವಸ ಮುಂಚಿತವಾಗಿ ತಿಳಿಸುತ್ತಾರೆ.

ಶ್ರೀ ಡಿ. ಬಿ. ಚಂದ್ರೇಗೌಡ.—ಮಾನ್ಯ ಅಧ್ಯಕ್ಷರೇ, ಇಲ್ಲಿ ವೈಜ್ಞಾನಿಕವಾಗಿ ವಿಶ್ಲೇಷಣೆಯನ್ನು ಮಾಡಿದ್ದೇವೆ ಎಂದು ಹೇಳಿದ್ದಾರೆ. ವೈಜ್ಞಾನಿಕ ವಿಶ್ಲೇಷಣೆಯ ಪರಿದಿ ನಮ್ಮ ಮುಂದೆ ಇಲ್ಲ. ಆದ್ದರಿಂದ ಅವರು ಹೇಳಿದ್ದೇ ವೈಜ್ಞಾನಿಕ. ಎರಡನೆಯದು, ಕೆ.ಎಸ್.ಆರ್.ಟಿ.ಸಿ. ಮ್ಯಾನೇಜಿಂಗ್ ಡೈರೆಕ್ಟರ್ ಅವರನ್ನು ಅಪಾಯಿಂಟ್ ಮಾಡಿದ ಮೂರು ದಿವಸದಲ್ಲಿಯೇ ಬಸ್ ದರವನ್ನು ಏರಿಕೆ ಮಾಡಿದ್ದಾರೆ. ವೈಜ್ಞಾನಿಕ ವಿಶ್ಲೇಷಣೆಗೆ ಸಾಕಷ್ಟು ಸಮಯ ಆ ಅಧಿಕಾರಿಗೆ ಸಿಕ್ಕಿತ್ತೇ ? ಅವರು ಏನಾದರೂ ಅದನ್ನು ಓದಿದ್ದಾರೆಯೇ ? ಅಥವಾ ನೀವು ಹೇಳಿದ್ದನ್ನೇ ಅವರು ಮಾಡಿದ್ದಾರೋ ?

ಶ್ರೀ ಕೆ. ಜೆ. ಜಾರ್ಜ್.—ಇಲ್ಲ, ಹೊಸ ವಿ.ಸಿ.ಎಂ.ಡಿ. ಬರುವ ಮೊದಲೇ ಹಳೆಯ ವಿ.ಸಿ.ಎಂ.ಡಿ. ಇರುವಾಗಲೇ ಬಸ್ ದರವನ್ನು ಏರಿಸಲಿಕ್ಕೆ ಚರ್ಚೆ ಮಾಡಿ ನಿರ್ಧಾರ ಮಾಡಿದ್ದೆವು.

ಅಧ್ಯಕ್ಷರು.—ಮಾನ್ಯ ಸದಸ್ಯರಾದ ಮಾಲೀಕಯ್ಯ ವಿ. ಗುತ್ತೇದಾರ್ ಅವರ ಪರವಾಗಿ ಸದಸ್ಯರಾದ ಬಿ. ಸ್ವಾಮಿರಾವ್‌ರವರು ೭೧(೫೧)ರ ಪ್ರಶ್ನೆಯನ್ನು ಕೇಳಬಹುದು.

ಶ್ರೀ ಬಿ. ಪುಟ್ಟಸ್ವಾಮಿಗೌಡ (ಮಾನ್ಯ ಲೋಕೋಪಯೋಗಿ ಸಚಿವರು) —ಅಧ್ಯಕ್ಷರೇ, ಇದಕ್ಕೆ ಸಮಯಬೇಕು ಎಂದು ತಮ್ಮಲ್ಲಿ ಪ್ರಾರ್ಥನೆ ಸಲ್ಲಿಸಿದ್ದೇನೆ. ಇದಕ್ಕೆ ಕಾಲಾವಕಾಶ ಬೇಕಾಗಿದೆ.

ಅಧ್ಯಕ್ಷರು.—ಇದಕ್ಕೆ ಕಾಲಾವಕಾಶ ಬೇಕಾಗಿದೆ ಎಂದು ಮಾನ್ಯ ಸಚಿವರು ಕೇಳಿದ್ದಾರೆ. ಮುಂದಿನ ಸಾರಿ ಈ ಪ್ರಶ್ನೆಯನ್ನು ತೆಗೆದುಕೊಳ್ಳೋಣ.

ಶ್ರೀ ಬಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಸಚಿವರು).—ಮಾನ್ಯ ಅಧ್ಯಕ್ಷರೇ, ಪ್ರಶ್ನೆ ಸಂಖ್ಯೆ ೭೧ (೧೭) ಇದು ಎನರ್ಜಿ ಮಿನಿಸ್ಟರ್‌ಗೆ ಸಂಬಂಧಪಟ್ಟಿರತಕ್ಕಂಥ ಪ್ರಶ್ನೆ. ಬಹುಶಃ ಈ ಪ್ರಶ್ನೆಗೆ ಅವರು ಉತ್ತರಿಸುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ.

ಅಧ್ಯಕ್ಷರು.—ಈ ಪ್ರಶ್ನೆಯನ್ನು ಪವರ್ ಮಿನಿಸ್ಟರ್ ಅವರ ಡಿಪಾರ್ಟ್‌ಮೆಂಟ್‌ಗೆ ಟ್ರಾನ್ಸ್‌ಫರ್ ಮಾಡಲಾಗಿದೆ.

ಶ್ರೀ ಬಿ. ರಮಾನಾಥ್ ರೈ.—ಮಾನ್ಯ ಅಧ್ಯಕ್ಷರೇ, ನನ್ನ ಪ್ರಶ್ನೆ ಏನೆಂದರೆ ಬಂಟ್ವಾಳ ತಾಲ್ಲೂಕಿನಲ್ಲಿ ನಿರ್ಮಾಣವಾಗುತ್ತಿರುವ ವಿವಿಧೋದ್ದೇಶ ಯೋಜನೆಯಾದ ಸರಪಾಡಿ ಅಣೆಕಟ್ಟು ನಿರ್ಮಾಣ ಯೋಜನೆಯು ಯಾವ ಹಂತದಲ್ಲಿದೆ, ಎಂದು ಕೇಳಿರುವುದರಿಂದ ಇದಕ್ಕೆ ಮಾನ್ಯ ಲೋಕೋಪಯೋಗಿ ಸಚಿವರೇ ಉತ್ತರ ಕೊಡುತ್ತಾರೆಂದು ನನ್ನ ಅಭಿಪ್ರಾಯ.

ಅಧ್ಯಕ್ಷರು.—ಮಂತ್ರಿಗಳು ಅಭಿಪ್ರಾಯ, ಇದು ಪವರ್ ಮಿನಿಸ್ಟರ್‌ಗೆ ಹೋಗುತ್ತದೆ ಎಂದು ಹೇಳುತ್ತಾರೆ.

ಶ್ರೀ ಬಿ. ರಮಾನಾಥ್ ರೈ.—ಅಧ್ಯಕ್ಷರೇ, ಇರಿಗೇಷನ್ ಪ್ರಾಜೆಕ್ಟ್ ಮತ್ತು ಕುಡಿಯುವ ನೀರಿನ ಬಗ್ಗೆ ಪ್ರಶ್ನೆ ಇದ್ದರೆ ಅದು ವಿದ್ಯುತ್ ಇಲಾಖೆಗೆ ಯಾವರೀತಿ ಹೋಗುತ್ತದೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಇದನ್ನು ಕರ್ನಾಟಕ ಪವರ್ ಕಾರ್ಪೊರೇಷನ್‌ನವರು ಕಟ್ಟುತ್ತಿದ್ದಾರೆ. ಆದ್ದರಿಂದ ಈ ಪ್ರಶ್ನೆ ವಿದ್ಯುಚ್ಛಕ್ತಿ ಮಂತ್ರಿಗಳಿಗೆ ಸಂಬಂಧಪಟ್ಟಿದೆ.

ಅಧ್ಯಕ್ಷರು.—ಕರ್ನಾಟಕ ಪವರ್ ಕಾರ್ಪೊರೇಷನ್ ಇವರ ಹೊಣೆಗಾರಿಕೆ ಪಡೆದಿದೆ. ಮುಂದೆ ಈ ಪ್ರಶ್ನೆ ಬರುತ್ತದೆ.

ಬಜ್ಪೆ ಹಾಗೂ ಸೂರತ್ಕಲ್‌ನಲ್ಲಿರುವ ಪ್ರವಾಸಿ ಮಂದಿರಗಳು

೧೫೦. ಶ್ರೀ ವಿಜಯಕುಮಾರ್‌ಶೆಟ್ಟಿ (ಸೂರತ್ಕಲ್ ಕ್ಷೇತ್ರ).— ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬಜ್ಪೆ ಮತ್ತು ಸೂರತ್ಕಲ್‌ಗಳಲ್ಲಿರುವ ಪಿ.ಡಬ್ಲ್ಯೂ.ಡಿ ಪ್ರವಾಸಿ ಮಂದಿರಗಳು ಈ ಇಲಾಖೆಯ ಆಸ್ತಿಯೇ ಅಥವಾ ದಕ್ಷಿಣ ಕನ್ನಡ ಜಿಲ್ಲಾ ಪರಿಷತ್ ಆಸ್ತಿಯೇ ;

ಆ) ಮೇಲ್ಕಂಡ ಸ್ಥಳಗಳಲ್ಲಿ ಈಗಿರುವ ಪ್ರವಾಸಿ ಮಂದಿರಗಳು ಹಾಳುಬಿದ್ದು ಉಪಯೋಗವಾದಂತಹ ಸ್ಥಿತಿಯಲ್ಲಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ;

ಇ) ಮೇಲ್ಕಂಡ ಸ್ಥಳಗಳಲ್ಲಿ ನೂತನ ಪ್ರವಾಸಿ ಮಂದಿರಗಳನ್ನು ನಿರ್ಮಿಸುವ ಉದ್ದೇಶ ಸರ್ಕಾರಕ್ಕಿದೆಯೇ ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ದಕ್ಷಿಣ ಕನ್ನಡ ಜಿಲ್ಲಾ ಪರಿಷತ್‌ನವರ ನಿಯಂತ್ರಣದಲ್ಲಿದೆ.

ಆ) ಇಲ್ಲ. ಉಪಯೋಗ ಸ್ಥಿತಿಯಲ್ಲಿದೆ.

ಇ) ಇಲ್ಲ.

ಶ್ರೀ ವಿಜಯಕುಮಾರ್‌ಶೆಟ್ಟಿ.— ಮಾನ್ಯ ಅಧ್ಯಕ್ಷರೇ, ಬಜ್ಪೆ ಮತ್ತು ಸುರತ್ಕಲ್‌ಗಳಲ್ಲಿರುವ ಪಿ.ಡಬ್ಲ್ಯೂ.ಡಿ ಪ್ರವಾಸಿ ಮಂದಿರಗಳು ನಾದುರಸ್ತಿಯಲ್ಲಿವೆ. ಆಲ್ಲಿ ವಿಮಾನ ನಿಲ್ದಾಣ ಇರುವುದರಿಂದ ಅದು ಟೂರಿಸಂ ಸೆಂಟರ್ ಕೂಡ ಆಗಿದೆ ಆದ್ದರಿಂದ ಈ ಪ್ರವಾಸಿ ಮಂದಿರಗಳನ್ನು ನವೀಕರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ.— ಮಾನ್ಯ ಅಧ್ಯಕ್ಷರೇ, ಈ ಪ್ರವಾಸಿ ಮಂದಿರಗಳು ಲೋಕೋಪಯೋಗಿ ಇಲಾಖೆಯ ಆಸ್ತಿಯಲ್ಲ. ಇದು ಜಿಲ್ಲಾ ಪರಿಷತ್ತಿಗೆ ಸಂಬಂಧಪಟ್ಟ ರತಕ್ಕಂಥ ಆಸ್ತಿ. ಇದರ ನಿಯಂತ್ರಣ ಮತ್ತು ಇದರ ಮೇಲ್ವಿಚಾರಣೆಯನ್ನು ಜಿಲ್ಲಾ ಪರಿಷತ್ತಿನವರು ಮಾಡ ಬೇಕಾಗಿರುವುದರಿಂದ ನಮ್ಮ ಮುಂದೆ ಈ ಪ್ರಸ್ತಾಪ ಇಲ್ಲ.

ಶ್ರೀ ಜಿ. ಪುಟ್ಟಸ್ವಾಮಿಗೌಡ.— ಅಧ್ಯಕ್ಷರೇ, ಪ್ರಶ್ನೆ ಸಂಖ್ಯೆ ೭೩(೨೯) ಈ ಪ್ರಶ್ನೆಗೆ ಟೈಮ್‌ಬೇಕು ಎಂದು ತಮ್ಮಲ್ಲಿ ಅಪ್ಪಣೆಯನ್ನು ಕೇಳಿದ್ದೇನೆ.

ಶ್ರೀ ಎಲ್. ಆರ್. ಶಿವರಾಮೇಗೌಡ.— ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೆಯನ್ನು ಕಳಿಸಿ ಇವತ್ತು ದಿವಸವಾಗಿದೆ. ಸರ್ಕಾರದಲ್ಲಿ ಎಲ್ಲಾ ಸಚಿವರುಗಳಿದ್ದರೂ ಉತ್ತರ ಕೊಡುವುದಕ್ಕೆ ಏನು ತೊಂದರೆ ಇದೆ ಎಂದು ತಮ್ಮ ಮುಖಾಂತರ ಮಾನ್ಯ ಮಂತ್ರಿಗಳನ್ನು ಕೇಳಬಯಸುತ್ತೇನೆ.

ಅಧ್ಯಕ್ಷರು.— ಟೈಮ್ ಬೇಕೆಂದು ಕೇಳಿದ್ದಾರೆ. ಟೈಮ್ ಕೊಡೋಣ. ಪುನಃ ಈ ಪ್ರಶ್ನೆ ಬರುತ್ತದೆ.

ಶ್ರೀ ಎಲ್. ಆರ್. ಶಿವರಾಮೇಗೌಡ.— ಇದು ರಾಜ್ಯ ಸರ್ಕಾರಕ್ಕೇನೂ ಸಂಬಂಧಪಟ್ಟಿಲ್ಲ. ವಿಮಾನ ನಿಲ್ದಾಣಕ್ಕೆ ಕೇಂದ್ರ ಸರ್ಕಾರದಿಂದ ಹೆಚ್ಚು ಹಣ ಬರುತ್ತದೆ. ನಾವು ರಾಜ್ಯ ಸರ್ಕಾರದಲ್ಲಿ ವಿಮಾನ ನಿಲ್ದಾಣಗಳನ್ನು ಹೆಚ್ಚು ಮಾಡುತ್ತಿಲ್ಲ. ಏತಕ್ಕಾಗಿ ಅದನ್ನು ಅಭಿವೃದ್ಧಿ ಪಡಿಸುತ್ತಿಲ್ಲ ಎನ್ನುವುದರ ಬಗ್ಗೆ ಗಮನ ಸೆಳೆಯಬೇಕು ಎಂದು ಈ ಪ್ರಶ್ನೆಯನ್ನು ಕೇಳಿದ್ದೇನೆ.

ಅಧ್ಯಕ್ಷರು.— ನೆಕ್ಸ್ಟ್ ವೀಕ್‌ನಲ್ಲಿ ಈ ಪ್ರಶ್ನೆಗೆ ಉತ್ತರ ಬರುತ್ತದೆ.

ಏತ ನೀರಾವರಿ ನಿಗಮಗಳು ಕೈಗೊಂಡ ಏತ ನೀರಾವರಿ ಯೋಜನೆಗಳು

೭೬೩. ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ).— ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಏತ ನೀರಾವರಿ ನಿಗಮವು ಯಾವಾಗ ಸ್ಥಾಪಿತವಾಯಿತು ?

ಆ) ಏತ ನೀರಾವರಿ ನಿಗಮವು ಸ್ಥಾಪಿತಗೊಂಡಾಗಿನಿಂದ ಈವರೆಗೆ ತೆಗೆದುಕೊಂಡಿರುವ ಕಾಮಗಾರಿಗಳೆಷ್ಟು ?

ಇ) ಪೂರ್ಣಗೊಂಡ ಕೆಲಸಗಳೆಷ್ಟು ? ನಡೆಯುತ್ತಿರುವ ಕೆಲಸಗಳೆಷ್ಟು ? ಹಾಗೂ ಈ ಕೆಲಸಗಳಿಗೆ ಈವರೆಗೆ ಆಗಿರುವ ಒಟ್ಟು ಖರ್ಚು ಎಷ್ಟು ?

ಈ) ನಿಗಮದಿಂದ ನೇಮಕಗೊಂಡಿರುವ ಇಂಜಿನಿಯರ್‌ಗಳ ಸಂಖ್ಯೆ ಎಷ್ಟು ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ನೀರಾವರಿ ಮತ್ತು ಲೋಕೋಪಯೋಗಿ ಮಂತ್ರಿಗಳು).—

ಅ) ಬಿಜಾಪುರ ಹಾಗೂ ಮೈಸೂರುಗಳಲ್ಲಿ ಕೇಂದ್ರಸ್ಥಾನ ಹೊಂದಿದ ಎರಡು ಏತ ನೀರಾವರಿ ನಿಗಮಗಳನ್ನು ದಿನಾಂಕ ೨೯-೫-೧೯೮೬ರ ಸರ್ಕಾರದ ಆದೇಶ ಸಂಖ್ಯೆ ಪಿಡಬ್ಲ್ಯೂಡಿ ೬೬ ಐಎಫ್‌ವೈ ೮೬ರಲ್ಲಿ ರದ್ದುಪಡಿಸಲಾಯಿತು.